Regd No BG 155

— ೨೮ —

29—4—1961

Sri
"SATYAVADI"
— DAILY —
MYSORE 4
45 th Year

Protect the cow

ಪ್ರಮುಖ ವರ್ತಮಾನಗಳಿಗೆ
ಅಳಿಯದೇ ಉಳಿಯುವ ಖನಗಳಿಗೆ
• ಸತ್ಯವಾದಿ ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ ೨ ರೂ

ಗೋಸಂರಕ್ಷಣೆ

ಸ್ಥಾಪಕರು— ಅಂಚೆ ಸಿಂಪ್ಲೇದಾರ್ ಎಂ. ವಿ. ಸುಬ್ಬಂತಯ್ಯರು [ಬಿಡಿ ಪ್ರತಿ 3 ಪೈ

ಉಪ ನಾಯಕತ – ನೂಕಕಂಡಂತೆ ಮಾಡಲು ನೆಹರುರಿಗೆ ಅಧಿಕಾ

ಎ ತ್ತ

ಮಹಾರಾಜರ ಭಾಷಣ

ಪೆಪಿಫಿಕ್‌ಕೋಸ್ಟ್ ಸ್ಟೇಟ್ ಶಾಸನ ಸಭೆಯಲ್ಲಿ ಮೈಸೂರು ಮಹಾರಾಜರು ಭಾಷಣ ಮಾಡಿ, ಅಮೆರಿಕ ಮತ್ತು ಭಾರತ ಒಂದೇ ಆಧ್ಯಾತ್ಮಿಕ ಗುರಿ ಸಾಧಿಸಲು ಪ್ರಯತ್ನಿಸುತ್ತಿವೆ. ಆದರೆ ದಾರಿ ಮಾತ್ರ ಬೇರೆ ಎಂದು ತಿಳಿಸಿದರು ಎಂದು ಸಲೆಂ ವಂದಿ ತಿಳಿಸುತ್ತದೆ

ನಿರಾಕರಣೆ

ಬ್ರಿಟಿಷ್ ಪ್ರದೇಶದಿಂದ ಅಮೆರಿಕ ನೆಲೆಗಳನ್ನು ವಾಪಸು ಪಡೆಯುವಂತೆ ಕಾಮನ್ವೆಲ್ತಿನಲ್ಲಿ ಮಾಡಿದ ಸಲಹೆಯನ್ನು ಪ್ರಧಾನಿ ಮ್ಯಾಕ್ಮಿಲನ್ನರು ತಿರಸ್ಕರಿಸಿದರು.

ಕದನ ನಿಲ್ಲಬೇಕು

ನವ ದೆಹಲಿ 28 — ಅಂತರ್ರಾಷ್ಟ್ರೀಯ ಲಾಲೋ ಸಮಿತಿಯು ಕಾರ್ಯಾರಂಭವನ್ನು ಪಂ॥ ನೆಹರು ನಿರೀಕ್ಷಿಸಿ, ಲಾಲೋಸಿನಲ್ಲಿ ಕದನ ನಿಲ್ಲಬೇಕೆಂದು ತಿಳಿಸಿದರು.

ನವ ದೆಹಲಿ 28 — ಪಕ್ಷದ ಉಪ ನಾಯಕರ ಚುನಾವಣೆಯ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಪಕ್ಷದ ನಾಯಕರಾದ ಪಂ॥ ನೆಹರುರವರಿಗೆ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷ ಅಧಿಕಾರವನ್ನಿತ್ತಿತು. ನಾಯಕರಾಗಲು ಉಪ ನಾಯಕ ಪದವಿ ದಾರಿ ಎಂದು ಪಕ್ಷ ತಿಳಿಯುವದಿಲ್ಲ ಎಂಬ ನಿರ್ಣಯ ಅಂಗೀಕೃತವಾಯಿತು. ಉಪ ನಾಯಕ ಪದವಿ ನಾಯಕರಾಗಲು ದಾರಿ ಎಂಬ ಅಭಿಪ್ರಾಯ ಒದಲಾಗುವಂತೆ ಪಕ್ಷದ ಘಟನೆ ತಿದ್ದುಪಡಿ ಆಗಬೇಕೆಂದು ಪಂ॥ ನೆಹರು ತಿಳಿಸಿದರು.

ಪದಗಳಿಗೆ ಹಿಂದಿ ತರ್ಜುಮೆ

ನವ ದೆಹಲಿ 28 — ಕೇಂದ್ರ ಶಿಕ್ಷಣ ಮಂತ್ರಿ ಶಾಖೆಯು 61 ರ ಮಾರ್ಚ್ 31 ರವರಿಗೆ 27 ಎಷ್ಟುಗಳಿಗೆ 261324 ಪಾರಿಭಾಷಿಕ ಶಬ್ದಗಳಿಗೆ ಹಿಂದೀ ಶಬ್ದಗಳನ್ನು ರೂಪಿಸಿಕೊಟ್ಟಿದೆ ಎಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು

ಸಿಯಾಟೊ ಬಲ ಬಳಸುವ ತೀರ್ಮಾನ

ವಾಷಿಂಗ್ಟನ್ 28 — ಲಾವೋಸಿನಲ್ಲಿ ಬ್ರಿಟಿಷ್-ರಷ್ಯ ಕರೆಗೆ ಪ್ರತಿಕ್ರಿಯೆ ಲಾವೋ ಗಮನ ಕೊಡದೆ ಕದನ ವಿರಾಮಕ್ಕೆ ಅವಕಾಶ ಮಾಡದೆ ವಿರ್ಟ್ಜ್‌ಮೇಲೆ ದಾಳಿ ಮಾಡಿರುವ ಬಿದಿರಿಕ ಇರುವದರಿಂದ, ಕಮ್ಯೂನಿಸ್ಟರ ದಾಳಿ ಎದುರಿಸಲು ಸಿಯಾಟೊ ಬಲ ಉಪಯೋಗಿಸಲು ಅಧ್ಯಕ್ಷ ಕೆನಡಿಯವರು ಅಡಳಿತ ಪರಿಶೀಲಿಸುತ್ತಿದೆ ಎಂದು ವಂದಿ ಅಗಿದೆ ಥಾಯ್ಲಾಂಡ್, ಪಾಕಿಸ್ತಾನ ಬ್ರಿಟಿಷ್ ಸರ್ಕಾರಂದೊಡನೆ ಸಹಕರಿಸಲು ಸೇನೆ ಕಳಿಸುವದಾಗಿ ತಿಳಿಸಿತ್ತು.

ವರ್ತಕರಿಗೆ ಭರವಸೆ

ಬೆಂಗಳೂರು 28 — ಮೈಸೂರು ವ್ಯಾಪಾರಿಗಳ ಪ್ರಥಮ ಸಮ್ಮೇಳನವನ್ನು ಮುಖ್ಯ ಮಂತ್ರಿ ಶ್ರೀ ಬಿಡಿ ಜತ್ತಿಯವರು ಉದ್ಘಾಟಿಸುತ್ತಾ, ಹೊಸ ಪ್ರಾಂತಕ್ಕೆ ಕೈಗಾರಿಕೆಗಳಿಗೆ ಸಂರಕ್ಷಣೆ ನೀಡುವ ಭರವಸೆ ಇತ್ತರು.

ನಿಷೇಧಾಜ್ಞೆ

ಸಾಂಗ್ಲಿ 28 — ನಿರ್ದಿಷ್ಟವಾದ ಸ್ಥಳಗಳಲ್ಲಿ ಈ ವಾರ ಫೆ.29 – 30 ನೆಪ್ಪು ಕಾಲಗಳಲ್ಲಿ ಮೆರವಣಿಗೆಗಳು, ಘೋಷಣೆಗಳನ್ನು ಕೂಗುವದು ಮುಂತಾದುವುಗಳನ್ನು ನಿಷೇಧಿಸಿದೆ. ಮಹಾರಾಷ್ಟ್ರ ಸಮಿತಿ ಗಡಿ ಸತ್ಯಾಗ್ರಹ ಮೊರ್ಚಾ ಘೋಷಿಸಿದುದರಿಂದ ಈ ಕ್ರಮ.

ಬಂಧನ

ಬೆಂಗಳೂರು 28 — ವಿದೇಶಿಯರ ರಿಜಿಸ್ಟ್ರೇಷನ್ನಿನ ಕಾನೂನು ಪ್ರಕಾರ ಸಯಾದ್ ಅಲಿ ಹಾಸನ ಎಂಬವನ ಬಂಧನವಾಯಿತು.

ವಿವಿಧ ವಿಷಯಗಳು

ಬಳ್ಳಾರಿ 28 — ದನಗಳನ್ನು ಉಚಿತ ಕೊಡುವದು ಕಾನೂನು ವಿರುದ್ಧವೆಂದು ಹೂವಿನಹಡಗಲಿಯಲ್ಲಿ 5 ವರ್ಷಕ್ಕೆ ನಡೆಯುವ ದನಗಳ ಜಾತ್ರೆಯಲ್ಲಿ ಪೋಲೀಸರು ತಿಳಿಸಲು, ಗುಂಪು ಹಿಂಸಾತ್ಮಕವಾಗಲು ಪೋಲೀಸರು ಗುಂಡುಹಾರಿಸಿದರು. ಈರ್ವರು ಮರಣಹೊಂದಿ ಕೆಲವರಿಗೆ ಗಾಯಗಳಾದವು.

ಬೆಂಗಳೂರು 29 — ಸ್ಥಾನಮಾನ ಹಿಂದ ಅಭಿವೃದ್ಧಿ ಮಂತ್ರಿ ಶ್ರೀ ಹೆಚ್ ಸಿದ್ದಲಿಂಗಾರೆಡ್ಡಿಯವರು ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ, 1963 ರ ವೇಳೆಗೆ ತಾಲೂಕಾಹಿಕ ಅಭಿವೃದ್ಧಿ ಕಾರ್ಯಕ್ರಮ ಸರ್ವ ಗ್ರಾಮಗಳಿಗೂ ಅನ್ವಯಿಸುವದು ಎಂದರು.

ಕಂಚಿ 28 — ಅತಿಕ್ರಮಣ ಪ್ರವೇಶವನ್ನು ಮಾಡಿದ ಆರೋಪದ ಮೇಲೆ ಪೂರ್ವ ಪಾಕಿಸ್ತಾನದ ಪೋಲೀಸರು ಬಂಧಿಸಿದ್ದ ಮುನ್ನೂರು ಮಂದಿ ವಿಮಾನು ಹಿಂತಿರುಗುವಂತೆ ಪ್ರೇತಿ ಆರು ಜನರನ್ನು ಬಿಟ್ಟು ಉಳಿದವರು ಬಿಡುಗಡೆ ಆಗಿದ್ದಾರೆ.

ಕೊಕ್ಕಿಲ್‌ಹಾತ್ ಎಲೆ 28 — ಕಾಂಗೋನಿನ ಭವಿಷ್ಯ ನಿರ್ಧರಿಸುವ ರಾಷ್ಟ್ರೀಯ ಸಮ್ಮೇಳನಕ್ಕೆ ಕಟಾಂಗದ ಅಧ್ಯಕ್ಷ ಶೋಂಬೆ ವಾಪಸು ಕರೆತರಲ್ಪಟ್ಟರು

ನವ ದೆಹಲಿ 28 — ಮೇ 13ರಿಂದ ರಾಷ್ಟ್ರೀಯ ಮಹಿಳಾ ಹಾಕಿ ಚಾಂಪಿಯರ್‌ಷಿಪ್ ಪಂದ್ಯ ಧೂಪಾಲಿನಲ್ಲಿ ನಡೆಯುವದು.

ನಾಳೆಯ ಪಂಚಾಂಗ

ಅಶ್ವತ್ಥ ಮಹಾವಿದ್ಯಾರ್ಥಿ ಧರ್ಮಾಧಿಕಾರಿ
ದೈವಜ್ಞಶಿರೋಮಣಿ
ಸಂಪತ್ಕುಮಾರ್ ಜೋಯಿಸರಿಂದ
30 ಪೂರ್ಣವಿ ಸ್ವಾತಿ

★

ಗೋದರ್ಶನ : ಈ ತಿಂಗಳಿನ ಗೋಲಕ್ಷಣ ಪ್ರಕಟಣೆಗೆ ಚಾಂದ್ರಾಂತರದಿಂದ ಅವಕಾಶವಾಗಿದೆ.

ನಿಮಗೆ ಬಲಹೀನತೆ ಉಂಟೇ ?

ಖ್ಯಾತನಾಮರಾದ ವೈದ್ಯರಾದ ಎ. ಎಲ್ ಸರ್ಕಾರ್ (ಸರ್ಕಾರಿ ರಿಜಿಸ್ಟರ್ಡ್) ಮತ್ತು ಡಾ॥ ಎಸ್. ಎಂ. ಆರ್. ಮೋಹಿನಿಯವರನ್ನು ಖುದ್ದು ಭೇಟಿಮಾಡಿ ಅವರು ನರಗಳ ನಿಶ್ಯಕ್ತಿ, ಬಹುಮೂತ್ರ, ಮೂಲಾ ವ್ಯಾಧಿ ಮುಂತಾದ ವ್ಯಾಧಿಗಳಿಗೆ ವಿಫಲವಾಗದ ಚಿಕಿತ್ಸೆ ನಡೆಸುವರು

ನರಗಳ ನಿಶ್ಯಕ್ತಿ, ಲಂಬಾಗೊ, ಪಾರ್ಶ್ವವಾಯುವಿಗೆ ಔಷಧಿಯಲ್ಲದೆ ಎಲೆಕ್ಟ್ರೋಥೆರೊಪಿ ಮೂಲಕ ಚಿಕಿತ್ಸೆ

ಸಲಹೆಯ ಕಾಲ : ಬೆಳಿಗ್ಗೆ 9 ರಿಂದ 1 ಗಂಟೆ ಸಂಜೆ : 5 ರಿಂದ 6–30 ಗಂಟೆ
ಭಾನುವಾರ ಬೆಳಿಗ್ಗೆ 10 ರಿಂದ 1 ಗಂಟೆ
ಹೆಡ್ ಆಫೀಸ್

ಸರ್ಕಾರ್ ಡಿಸ್ಪೆನ್ಸರಿ
ಖಲೀಲ್ ಬಿಲ್ಡಿಂಗ್ಸ್, ಚಿಕ್ಕಪೇಟೆ, ಬೆಂಗಳೂರು–2
ಸರ್ಕಾರ್ ಡಿಸ್ಪೆನ್ಸರಿ (ಶಾಖೆ)
263 ಶಕ್ತಿ ಎಸ್ಟೇಟ್ ಅಂಡ್ ಕೋ ಲಿಮಿ ಮೈಸೂರು

ಅಷ್ಟ ಗ್ರಹ ಯೋಗ ..... !

ಈ ವರ್ಷದ ಸಂವತ್ಸರದಲ್ಲಿ ಅನೇಕ ದುಃಖವಾದ ವಿಪ್ಲವಗಳನ್ನು ಇದಿರಿಸಿ [illegible] ವರಿಸ್ಥಿತಿಯಲ್ಲಿ ಜನತೆಯು ಕಳವಳಗೊಂಡಿರುವುದಂಲ್ಲಿ ಆಶ್ಚರ್ಯ [illegible]

ತಾ || 3–2–1962 ನೆಯ ಫುಷ್ಯ ಬಹುಳ ತ್ರಯೋದಶೀ ಶನಿವಾರ [illegible] 4 ಘಂಟೆಯ ೨ನೆ ತಾ || 5–2–1962 ನೆಯ ಮಾಘ ಶುದ್ಧ ಪ್ರತಿಪತ್ [illegible] ತಿ, 7 ಘಂಟೆಯ ವರೆವಿಗೆ ಮೆಷ ರಾಶಿಯಲ್ಲಿ ಸೂರ್ಯ, ಚಂದ್ರ [illegible] ಗುರು, ಶುಕ್ರ, ಶನಿ ಫುಷ್ಯ ನೇಕ, ಈ ಎಂಟು ಗ್ರಹಗಳ [illegible]

ಪಂಚೇಷು ಕೋಷ್ಠೇಷ್ವಗತಾ ಸ್ಥಿರೋರ್ಧ್ವಂ ಯದಾ ಗ್ರಹಾಃ |
ಸರ್ವಾಶಯೇಷ್ವೇವ ಲೋಕಾನಾಂ ವಿಜ್ಞೇಯಾ ಸ್ಸುಮಹೀಕ್ಷಿತಾಂ ||

ಒಂದೇ ನಕ್ಷತ್ರದಲ್ಲಿ ಮೂರಕ್ಕಿಂತ ಹೆಚ್ಚು ಗ್ರಹಗಳು ಸೇರುವ ಕಾಲದಲ್ಲಿ ಭೂಪಾಲಕರಿಗೆ ಏನಾಶಕಾಲವೆಂದು ತಿಳಿಯಬೇಕು.

ಏಕೇನ ಯದಿವಾ ದ್ವಾಭ್ಯಾಂ ಗ್ರಹಾಭ್ಯಾಂ ಸಹಿತೋ ಗುರುಃ |
ಶನೈಶ್ಚರೋ ವಾ ದೃಶ್ಯೇತ ತದಾ ದುರ್ಭಿಕ್ಷ್ಯಮಾದಿಶೇತ್ ||

ಗುರುವಾಗಲೀ ಶನೈಶ್ಚರನಾಗಲೀ ಒಂದು ಅಥವಾ ಎರಡು ಗ್ರಹಗಳೊಡನೆ ಸೇರಿದಾಗ ಲೋಕದಲ್ಲಿ ದುರ್ಭಿಕ್ಷವು ಪ್ರಾಪ್ತವಾಗುವುದು.

ಸೌಮ್ಯೇ ಶ್ವಾಷ್ಟೇ ಶನಿಷ್ಠಾಸು ಸ್ಥಿತೇ ಸೌರೇ ಮಹೀಕ್ಷಿತಃ |
ಸರ್ವಪೀಡಾಂ ಸಮರ್ಹಂತಿ ಯುಧಾ ಯಾಂತಿ ಯಮಾಂತಿಕಂ ||

ಶ್ರವಿಷ್ಠಾ ನಕ್ಷತ್ರದಲ್ಲಿ ಶನಿಯು ಪಂಚಮಿಸುವಾಗ ಯುದ್ಧ ಮತ್ತು ಪಟ್ಟಣದ ಬಳಿಗಿಲು ವಿಶಾಲವಾಗಿ ತೆರೆದೇ ಇರುವುದು ; ಇದರಿಂದ ಭೂಲೋಕಕ್ಕೆ ಪೀಡೆಯು ತಪ್ಪಿದ್ದಲ್ಲ, ಎಂಬೀ ಪ್ರಮಾಣವಾಕ್ಯಗಳು ವಿಷ್ಣುಧರ್ಮೋತ್ತರ ಮಹಾ ಪುರಾಣದಲ್ಲಿ ಉಕ್ತವಾಗಿದೆ.

ಈ ಅಧಾರ ವಾಕ್ಯಗಳ ಉದಾಹರಣೆಯನ್ನಿಟ್ಟುಕೊಂಡು ಈ ವರ್ಷದ ಗ್ರಹಗಳ ಸ್ಥಿತಿಯನ್ನು ವಿಮರ್ಶಿಸಿದರೆ—

1	6–11–61 ರಿಂದ	8–11–61 ರವರೆಗೆ	ತುಲಾರಾಶಿಯಲ್ಲಿ	4 ಗ್ರಹಗಳೂ
2	29	6–12–61	ವೃಶ್ಚಿಕದಲ್ಲಿ	4
3	6	8	,,	5
4	8	15	,, ಪುನಃ	4
5	23	3–1–62	ಧನಸ್ಸಿನಲ್ಲಿ	4
6	3–1–62	13.1–62	ಮಕರದಲ್ಲಿ	4
7	13	16	,,	5
8	16	24		6
9	24	3-2-62		7
10	3-2-62	5		8
11	5	9		7
12	9	12		6
13	12	24		5
14	24	3–3–62		4
15	3-3-62	5	ಕುಂಭರಾಶಿಯಲ್ಲಿ	4 ಸೇರಿಕೆ

(ಮುಂದುವರಿಯುವುದು)

ಸೋವಿಯಟ್ ವೀಕ್ಷಕ ಪ್ರಯುಕ್ತ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ.

Edited, Printed & Published by the Proprietor Dharma Panchana Nirata M. S. KrishnaRao, at the Satyavadi Press Chamarajapuram, Mysore 4

ವುಡ್‌ಲ್ಯಾಂಡ್ 28–4–61 ನೇ ಶುಕ್ರವಾರದಿಂದ

.... ಬಾನಿ ರೂಪ ಫಿಲ್ಮ್‌ಸ್ತವಂ ....

ಮಾ ಸೂ ವ್ (ಹಿಂದಿ)

ತಾರಾಗಣ— ಹನಿ ಇರಾನಿ ಸದೋಸ್ ಇರಾನಿ, ಅಜೀಜ್, ಅಶೋಕ್ ಕುಮಾರ್

★ ಪ್ರದರ್ಶಿಸಿದ ಕಡೆಗಳಲ್ಲೆಲ್ಲಾ ಅತ್ಯುತ್ಸಾಹವಾಗಿ ಹೊಗಳಿದ್ದಾರೆ ★

ದಿನವಹಿ 3 ಪ್ರದರ್ಶನಗಳು

ಅಪೆರಾ— 27–4–61 ರಿಂದ

★ ಹೃದಯಂಗಮ ಸಂಗೀತಮಯ ಚಿತ್ರ ★

ರೇಶ್ಮೀ ರುಮಾಲ್ [ಹಿಂದಿ]

ಶಕೀಲ, ಮನೂಜ್, ಕೆ ಎಂ ಸಿಂಗ್, ಮುಮ್ತಾಜ್ ಹೆಲೆನ್, ಸುಲೋಚನ ಚಟರ್ಜಿ

ದಿನವಹಿ 3 ಆಟಗಳು

ಬಾಹ್ಯಾಕಾಶ ನೌಕೆಯಲ್ಲಿ ಹೊರಟಿರುವ ಪ್ರಥಮ ಮಾನವ ಯೂರಿ ಗಾಗರಿನ್

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ
" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರಕ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಪಶುಸಾಮ್ರಾಜ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವರ್ತಕರ್ಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು